QP Code: CBG-02

# कर्नाटकसंस्कृतविश्वविद्यालयः

## सर्टिफिकेट्-परीक्षाः - २०२५

## भगवद्गीता

### ಪತ್ರಿಕೆ–2, ವಿಷಯ: ಗೀತೆಯ 18 ಅಧ್ಯಾಯಗಳು

**Total No. of Questions: 49** **Total No. Of Printed Pages: 4**
**Date: 23.11.2025** **Time: 2.30 PM to 5.00 PM** **Max Marks: 80**

**I. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.** **40x1=40**

1. ಭಗವದ್ಗೀತೆ ಯಾವ ಮಹಾಕಾವ್ಯದ ಭಾಗವಾಗಿದೆ?

   ಅ. ರಾಮಾಯಣ ಆ. ಮಹಾಭಾರತ ಇ. ಭಾಗವತ ಪುರಾಣ ಈ. ಪದ್ಮಪುರಾಣ

2. ಗೀತೆ ಯಾವ ಪರ್ವದಲ್ಲಿ ಬರುತ್ತದೆ?

   ಅ. ಉಪಪರ್ವ ಆ. ಅರಣ್ಯಪರ್ವ ಇ. ಭೀಷ್ಮಪರ್ವ ಈ. ಶಾಂತಿಪರ್ವ

3. ಗೀತೆಯಲ್ಲಿ ಎಷ್ಟು ಅಧ್ಯಾಯಗಳಿವೆ?

   ಅ. 16 ಆ. 17 ಇ. 18 ಈ. 20

4. ಗೀತೆಯಲ್ಲಿರುವ ಒಟ್ಟು ಶ್ಲೋಕಗಳ ಸಂಖ್ಯೆಯು ಎಷ್ಟು?

   ಅ. 500 ಆ. 700 ಇ. 600 ಈ. 100

5. ಗೀತೆಯು ಮುಖ್ಯವಾಗಿ ಯಾರ ನಡುವೆ ನಡೆದ ಸಂಭಾಷಣೆಯಾಗಿದೆ?

   ಅ. ಕೃಷ್ಣ–ಯುಧಿಷ್ಠಿರ ಆ. ಕೃಷ್ಣ–ಅರ್ಜುನ

   ಇ. ದ್ರೋಣ–ಅಶ್ವತ್ಥಾಮ ಈ. ಭೀಷ್ಮ–ಯುಧಿಷ್ಠಿರ

6. ತದಿದಂ ಗೀತಾಶಾಸ್ತ್ರಂ ಸಮಸ್ತ ------------ ಸಾರಸಂಗ್ರಹಭೂತಮ್ ।

   ಅ. ಸ್ಮೃತ್ಯರ್ಥ ಆ. ಶಾಸ್ತ್ರಾರ್ಥ ಇ. ಪುರಾಣಾರ್ಥ ಈ. ವೇದಾರ್ಥ

7. ಅರ್ಜುನನ ಶಂಖದ ಹೆಸರು ಏನು?

   ಅ. ಅನಂತವಿಜಯ ಆ. ದೇವದತ್ತ ಇ. ಪಾಂಚಜನ್ಯ ಈ ಸುಘೋಷ

8. ಗೀತೆಯ ಮೊದಲ ಅಧ್ಯಾಯದ ಹೆಸರು?

   ಅ. ಸಾಂಖ್ಯಯೋಗ ಆ. ಅರ್ಜುನ ವಿಷಾದಯೋಗ

   ಇ. ಧ್ಯಾನಯೋಗ ಈ. ಭಕ್ತಿಯೋಗ

9. ಕ್ಷೇತ್ರ–ಕ್ಷೇತ್ರಜ್ಞ ವಿವರಣೆ ಗೀತೆಯ ಯಾವ ಅಧ್ಯಾಯದಲ್ಲಿ ಬಂದಿದೆ?

   ಅ. 13 ಆ. 12 ಇ. 9 ಈ. 14

10. ಗೀತೆಯಲ್ಲಿ ಇರುವ ಕ್ಷೇತ್ರ ಎಂಬ ಪದಕ್ಕೆ ಯಾವ ಅರ್ಥ?

    ಅ. ದೇವಾಲಯ ಆ. ದೇಹ ಇ. ಮನಸ್ಸು ಈ. ಕರ್ಮ

11. ಗೀತೆಯನ್ನು ಶ್ಲೋಕಗಳ ರೂಪದಲ್ಲಿ ರಚಿಸಿದವರು ಯಾರು?

ಅ. ಭಗವಾನ್ ವೇದವ್ಯಾಸರು ಆ. ಕೃಷ್ಣ

ಇ. ಶ್ರೀಶಂಕರಭಗವತ್ಪಾದರು ಈ. ಅರ್ಜುನ

12. ಅಸುರೀ ಸಂಪತ್ತು ಎಂದರೆ ಏನು?

ಅ. ಧ್ಯಾನ ಆ. ಶಾಂತಿ ಇ. ದುಷ್ಟ ಲಕ್ಷಣ ಈ. ಮೋಕ್ಷ

13. ಅರ್ಜುನನು ಪ್ರಾರಂಭದಲ್ಲಿ ಯುದ್ಧಕ್ಕೆ ಹಿಂಜರಿದ ಕಾರಣ ಏನು?

ಅ. ಆಯುಧಗಳು ಇಲ್ಲದಿರುವುದರಿಂದ ಆ. ಶತ್ರು ಭಯ

ಇ. ಸ್ವಜನರ ಹತ್ಯೆಯ ದುಃಖ ಈ. ಆರೋಗ್ಯ

14. ಭಾವವಿಕಾರಗಳು ಯಾವುದಕ್ಕೆ ಇರುವುದಿಲ್ಲ?

ಅ. ಆಕಾಶ ಆ. ಆತ್ಮ ಇ. ಜಲ ಈ. ಮನಸ್ಸು

15. ಸಾಧನೆಯ ಪಥದಲ್ಲಿ ಮೊದಲ ಹೆಜ್ಜೆ ಯಾವುದು?

ಅ. ಕರ್ಮಯೋಗ ಆ. ಜ್ಞಾನಯೋಗ ಇ. ಅಷ್ಟಾಂಗಯೋಗ ಈ. ಉಪಾಸನಾ

16. ಆರುರುಕ್ಷೋರ್ಮುನೇರ್ಯೋಗಂ ----- ಕಾರಣಮುಚ್ಯತೇ ।

ಅ. ಜ್ಞಾನ ಆ. ಭಕ್ತಿ ಇ. ಕರ್ಮ ಈ ಶಕ್ತಿ

17. ಪರಿತ್ರಾಣಾಯ ಸಾಧೂನಾಂ ವಿನಾಶಯ ಚ ದುಷ್ಕೃತಾಂ ।

---- ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ॥

ಅ. ಕರ್ಮ ಆ. ಧರ್ಮ ಇ. ಜ್ಞಾನ ಈ ಭಕ್ತಿ

18. ಜ್ಞಾನವನ್ನು ಪಡೆಯುವುದಕ್ಕಾಗಿ ಗುರುಗಳ ಬಳಿಯಲ್ಲಿ ಹೇಗೆ ನಡೆದುಕೊಳ್ಳಬೇಕು?

ಅ. ಪ್ರಣಿಪಾತವನ್ನು ಮಾಡಬೇಕು ಆ. ಪರಿಪ್ರಶ್ನೆಯನ್ನು ಮಾಡಬೇಕು

ಇ. ಸೇವೆಯನ್ನು ಮಾಡಬೇಕು ಈ. ಈ ಮೂರನ್ನೂ ಮಾಡಬೇಕು.

19. ಸ್ಥಿತಪ್ರಜ್ಞ ಎಂದರೆ ಯಾರು?

ಅ. ಕರ್ಮಿ ಆ. ಕರ್ಮಯೋಗಿ ಇ. ಭಕ್ತ ಈ ಜ್ಞಾನಿ

20. ಗುಣಾತೀತ ಎಂದರೆ ಯಾರು?

ಅ. ಕರ್ಮಯೋಗಿ ಆ. ಕರ್ಮೀ ಇ. ಜ್ಞಾನೀ ಈ. ಭಕ್ತ

21. ಗೀತೆಯ ಪ್ರಕಾರ ಭಕ್ತರಲ್ಲಿ ಎಷ್ಟು ವಿಧ?

ಅ. 5 ಆ. 6 ಇ. 7 ಈ. 4

22. ನರಕಕ್ಕೆ ಇರುವ ಮೂರು ಬಾಗಿಲುಗಳು ಇವು.

ಅ. ದಕ್ಷಿಣ, ಉತ್ತರ, ಪೂರ್ವ ಆ. ಕಾಮ, ಕ್ರೋಧ, ಮೋಹ

ಇ. ಜ್ಞಾನ, ಅಜ್ಞಾನ, ವಿಪರೀತ ಜ್ಞಾನ ಈ. ತಿರಸ್ಕಾರ, ದ್ವೇಷ, ಅಸೂಯೆ

23. "ಎರಡು ಸೈನ್ಯಗಳ ಮಧ್ಯೆ ರಥವನ್ನು ತೆಗೆದುಕೊಂಡು ಹೋಗಿ ನಿಲ್ಲಿಸು" ಇದನ್ನು ಯಾರು? ಯಾರಿಗೆ ಹೇಳಿದ್ದಾರೆ?

ಅ. ಅರ್ಜುನ–ಕೃಷ್ಣನಿಗೆ ಆ. ದುರ್ಯೋಧನ–ದುಶ್ಶಾಸನನಿಗೆ

ಇ. ಧೃತರಾಷ್ಟ್ರ–ಸಂಜಯನಿಗೆ ಈ. ಧರ್ಮರಾಜ–ಅರ್ಜುನನಿಗೆ

24. ಸಂಜಯನು ಯಾರ ಪ್ರಸಾದ ಬಲದಿಂದ ಗೀತೆಯನ್ನು ಶ್ರವಣ ಮಾಡಿದನು?

ಅ. ಶಿವ ಆ. ಭಗವಾನ್ ಶ್ರೀವೇದವ್ಯಾಸರು

ಇ. ಇಂದ್ರ ಈ. ಚಂದ್ರ

25. ಇಂದ್ರಿಯಗಳಲ್ಲಿ ತಾನು ಯಾರೆಂದು ಕೃಷ್ಣನು ಹೇಳುತ್ತಾನೆ?

ಅ. ಕಣ್ಣು ಆ. ಶ್ರವಣೇಂದ್ರಿಯ ಇ. ಕರ್ಮೇಂದ್ರಿಯ ಈ. ಮನಸ್ಸು

26. ಯಜ್ಞಗಳಲ್ಲಿ ತಾನು ಯಾರೆಂದು ಪರಮಾತ್ಮನು ಹೇಳುತ್ತಾನೆ?

ಅ. ಅಗ್ನಿಹೋತ್ರ ಆ. ದರ್ಶಪೂರ್ಣ ಇ. ಜಪಯಜ್ಞ ಈ. ತಪಯಜ್ಞ

27. ವೃಕ್ಷಗಳಲ್ಲಿ ತಾನು ಯಾರೆಂದು ಭಗವಂತನು ಹೇಳುತ್ತಾನೆ?

ಅ. ಔದುಂಬರ ಆ. ಶ್ರೀಗಂಧ ಇ. ಅಶ್ವತ್ಥ ಈ. ಬಿಲ್ವ

28. ಆಯುಧಗಳಲ್ಲಿ ತಾನು ಯಾರೆಂದು ಭಗವಂತನು ಹೇಳುತ್ತಾನೆ?

ಅ. ತ್ರಿಶೂಲ ಆ. ವಜ್ರ ಇ. ಚಕ್ರ ಈ. ಗದೆ

29. ವಿಶ್ವರೂಪ ದರ್ಶನವು ಯಾವ ಅಧ್ಯಾಯದಲ್ಲಿ ಬರುತ್ತದೆ?

ಅ. 5 ಆ. 15 ಇ. 13 ಈ. 11

30. ಅಕ್ಷರಗಳಲ್ಲಿ ತಾನು ಯಾವ ಅಕ್ಷರವೆಂದು ಭಗವಂತನು ಹೇಳುತ್ತಾನೆ?

ಅ. ಅ ಆ. ಕ ಇ. ಹ ಈ. ಸ

31. ಧರ್ಮವನ್ನು ಮತ್ತು ಅಧರ್ಮವನ್ನು ವಿಪರೀತವಾಗಿ ತಿಳಿಯುವುದು ಯಾವ ಗುಣದ ಲಕ್ಷಣ?

ಅ. ಸತ್ವ ಆ. ರಜೋಗುಣ ಇ. ತಾಮಸ ಈ. ಮಿಶ್ರ

32. ಯಾವುದು ಆರಂಭದಲ್ಲಿ ವಿಷದಂತೆ ಭಾಸವಾಗಿ, ಕೊನೆಗೆ ಅಮೃತದಂತೆ ಇರುತ್ತದೆಯೋ ಆ ಸುಖವು ಯಾವ ಗುಣದ್ದು ?

ಅ. ಸತ್ವ ಆ. ರಜೋಗುಣ ಇ. ತಾಮಸ ಈ. ಮಿಶ್ರ

33. ಗೀತೆಯನ್ನು ಇವರಲ್ಲಿ ಯಾರಿಗೆ ಹೇಳಬಾರದು?

ಅ. ಭಕ್ತ ಆ. ತಪಸ್ವಿ

ಇ. ಶುಶ್ರೂಷಾ ನಿರತ ಈ. ಈ ಮೂರೂ ಅಲ್ಲದವನು

34. ಗುಣಗಳಲ್ಲಿ ರಾಗಾತ್ಮಕವಾದ ಗುಣವು ಯಾವುದು?

ಅ. ಸತ್ವ ಆ. ರಜೋಗುಣ ಇ. ತಾಮಸ ಈ. ಇವಾವುದೂ ಅಲ್ಲ

35. ಪ್ರಮಾದವನ್ನು ಉಂಟು ಮಾಡುವುದು ಯಾವ ಗುಣ?

ಅ. ಸತ್ವ ಆ. ರಜೋಗುಣ ಇ. ತಾಮಸ ಈ. ಮಿಶ್ರ

36. ತಮೋಗುಣ ಅಧಿಕವಾದವರು ಏನನ್ನು ಹೊಂದುತ್ತಾರೆ?

ಅ. ಊರ್ಧ್ವಲೋಕ ಆ. ಮನುಷ್ಯಲೋಕ ಇ. ಅಧೋಲೋಕ ಈ. ಸ್ವರ್ಗ

37. ಗೀತೆಯಲ್ಲಿ ಸಂಸಾರವನ್ನು ಯಾವ ವೃಕ್ಷಕ್ಕೆ ಹೋಲಿಸಿದ್ದಾರೆ?

ಅ. ಔದುಂಬರ ಆ. ಶ್ರೀಗಂಧ ಇ. ಅಶ್ವತ್ಥ ಈ. ಬಿಲ್ವ

38. ಭಗವಂತನು ಯಾವ ಭಕ್ತರನ್ನು ತನ್ನ ಆತ್ಮವೇ ಎಂದು ಹೇಳಿದ್ದಾನೆ?

ಅ. ಆರ್ತ	ಆ. ಜಿಜ್ಞಾಸು	ಇ. ಅರ್ಥಾರ್ಥೀ	ಈ. ಜ್ಞಾನೀ

39. ಪರಮಾತ್ಮನು ಸಾಂಖ್ಯರಿಗೆ ಹೇಳಿದ ನಿಷ್ಠೆ ಯಾವುದು?

ಅ. ಕರ್ಮಯೋಗ	ಆ. ಜ್ಞಾನಯೋಗ	ಇ. ಅಷ್ಟಾಂಗಯೋಗ	ಈ. ಪ್ರಾಣಾಯಾಮ

40. ಪರಮಾತ್ಮನು ಯೋಗಿಗಳಿಗೆ ಹೇಳಿದ ನಿಷ್ಠೆ ಯಾವುದು?

ಅ. ಕರ್ಮಯೋಗ	ಆ. ಜ್ಞಾನಯೋಗ	ಇ. ಅಷ್ಟಾಂಗಯೋಗ	ಈ. ಪ್ರಾಣಾಯಾಮ

## II. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. (ನಾಲ್ಕು ಪ್ರಶ್ನೆಗಳಿಗೆ ಮಾತ್ರ) 4x5=20

1. ದೇಹಿನೋಽಸ್ಮಿನ್ ಯಥಾ ದೇಹೇ ಕೌಮಾರಂ ಯೌವನಂ ಜರಾ ।
   ತಥಾ ದೇಹಾಂತರಪ್ರಾಪ್ತಿಃ ಧೀರಸ್ತತ್ರ ನ ಮುಹ್ಯತಿ ॥ – ಈ ಶ್ಲೋಕದ ಅರ್ಥವನ್ನು ಬರೆಯಿರಿ.
2. ಶುಕ್ಲಗತಿ ಮತ್ತು ಕೃಷ್ಣಗತಿಗಳ ಕುರಿತು ವಿವರಿಸಿ.
3. ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।
   ಅಭ್ಯುತ್ಥಾನಂ ಅಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್ ॥ – ಈ ಶ್ಲೋಕದ ಅರ್ಥವನ್ನು ಬರೆಯಿರಿ.
4. ಬ್ರಹ್ಮಣ್ಯಾಧಾಯ ಕರ್ಮಾಣಿ ಸಂಗಂ ತ್ಯಕ್ತ್ವಾ ಕರೋತಿ ಯಃ ।
   ಲಿಪ್ಯತೇ ನ ಸ ಪಾಪೇನ ಪದ್ಮಪತ್ರಮಿವಾಂಭಸಾ ॥ – ಈ ಶ್ಲೋಕದ ಅರ್ಥವನ್ನು ಬರೆಯಿರಿ.
5. ಭಗವಂತನು ಆಹಾರದ ವಿಷಯಯಾಗಿ ಗೀತೆಯಲ್ಲಿ ಏನನ್ನು ಹೇಳಿರುತ್ತಾನೆ?
6. ಭಗವಂತನ ಎರಡು ಪ್ರಕೃತಿಗಳ ಕುರಿತು ವಿವರಿಸಿ.

## III. ಕೆಳಗಿನ ಮೂರು ಪ್ರಶ್ನೆಗಳಲ್ಲಿ ಎರಡು ಪ್ರಶ್ನೆಗಳನ್ನು ವಿವರವಾಗಿ ಉತ್ತರಿಸಿ. 2x10=20

1. ಸ್ಥಿತಪ್ರಜ್ಞ, ಗುಣಾತೀತ ಮತ್ತು ಅಕ್ಷರೋಪಾಸಕರ ಲಕ್ಷಣಗಳನ್ನು ಸಂಗ್ರಹಿಸಿ ಬರೆಯಿರಿ ಮತ್ತು ಈ ಲಕ್ಷಣಗಳ ಅಧ್ಯಯನದಿಂದ ನಮಗೆ ಯಾವ ಪ್ರಯೋಜನವು ಉಂಟಾಗುತ್ತದೆ ಎಂದು ತಿಳಿಸಿರಿ.

ಅಥವಾ

2. ಕರ್ಮಯೋಗ ಎಂದರೆ ಏನು? ಮತ್ತು ಅದರ ಪ್ರಾಮುಖ್ಯತೆ ಏನು ಎಂದು ವಿವರವಾಗಿ ತಿಳಿಸಿರಿ.
3. ಭಗವಂತನ ಭಕ್ತರು ಎಷ್ಟು ವಿಧ ಮತ್ತು ಅವರುಗಳ ಲಕ್ಷಣವೇನು ಎಂದು ವಿವರಿಸಿ ಮತ್ತು ಭಕ್ತಿಯ ಮಹಿಮೆಯ ಕುರಿತಾಗಿ ವಿವರಿಸಿ.

* * * * *